ಕಲ್ಪನೆ ಕಾವ್ಯ



# ಗುಜರಿ ಮಜ್ದೂರಿ

ಹೆಚ್ಚುಕಮ್ಮಿ ಹೇಳಲೆಂದೇ,
ಹುಟ್ಟಿದ್ದೊಂದು ಜೀವ: ತಕ್ಕಡಿ!
ತಾಯಿ ತೂಗುತಿರುವಳಾದ್ದರಿಂದ
ತಕ್ಕಡಿಗಿಲ್ಲಿ ತೂಕ ಬಂದಿದೆ!

ಹೊಸ ವಸ್ತುಗಳಿಗೆ ಮೆತ್ತಿದಂತಿದ್ದು
ಸುರಕ್ಷ ಕವಚವಾಗೋ ರಟ್ಟು
ಮುಪ್ಪಡರಿ ಮೂಲೆ ಸೇರಿದೆ!,
ಹಸಿವ ಬೆಚ್ಚಗಿಟ್ಟು ಮರೆದ
'ಅವನ್' ನಿವೃತ್ತಿ ಹೊಂದಿದೆ!

ನೆನಪಿಟ್ಟು ಬೆನ್ನಟ್ಟಿ ಬಂದಪ್ಪಿಕೊಳುವ:
ಮುಪ್ಪು ಯಾರನ್ನು ಬಿಟ್ಟಿದೆ!

ವ್ಯತ್ಯಾಸವಿಷ್ಟೇ...
ವಸ್ತು ಮುಪ್ಪಾದರೆ ಗುಜರಿ,
ವ್ಯಕ್ತಿ ಮುಪ್ಪಾದರೂ
ಮಾಡಲೇಬೇಕು ಮಜ್ದೂರಿ!

**-ಅಶೋಕ ಸುರಪುರ**
**ಧಾರವಾಡ**

# ದೇವರಲ್ಲಿ ಅರಿಕೆ

ಬದುಕಿನ ತಕ್ಕಡಿಯಲ್ಲಿ
ನಾವೂ ತೂಕವೇ!
ಬಲವಿದ್ದಾಗ ಬೆಲೆ
ಹಳೆಯದಾದಷ್ಟು ಹಗುರ
ಜಗದ ವೈಭೋಗ ಕರಗುವುದು
ಇಲ್ಲಿ ಯಾವುದೂ ಹೊಸತಲ್ಲ;
ಅದೇ ಗಾಳಿ, ಅದೇ ನೀರು.

ದಿನಗಳು ಉರುಳಿದವು,
ನಾ ಇರುವೆ ಇಳಿಕೆ ಹಾದಿಯಲ್ಲಿ;
ಜೋಪಾನ ಹೆಜ್ಜೆ
ಇರುವಷ್ಟು ದಿನ ಜಾಗೃತ ಅವಸ್ಥೆ

ಯಾರಿಗೆ ಏಕೆ ಭಾರ?
ನನ್ನ ಅನ್ನ, ನನ್ನ ಬಟ್ಟೆ;
ನಾ ದುಡಿವೆ.
ಕಣ್ಣು ಎಳೆದಾಗ ನಿದ್ದೆ
ಕಣ್ಣು ತೆರೆದಾಗ ನಿತ್ಯ ಒಂದೇ
ಅರಿಕೆ; ಆ ದೇವರಲ್ಲಿ
'ಕೈಕಾಲಿಗೆ ಶಕ್ತಿ; ಹೃದಯಕ್ಕೆ
ಪ್ರೀತಿ ಕೊಡು'

**-ಶಿವಕುಮಾರ ಕಟ್ಟೀಮನಿ**
**ಘಟಪ್ರಭಾ**